ಕರ್ನಾಟಕ ಸರಕಾರ
( ಕಂದಾಯ ಇಲಾಖೆ )

ದೂರವಾಣಿ: (0824) 2220584,590
1077 (ಉಚಿತ ಕರೆ)
ಫ್ಯಾಕ್ಸ್: (0824) 2220584
ಇ-ಮೇಲ್: dc.mnglr@gmail.com

# ದಕ್ಷಿಣ ಕನ್ನಡ ಜಿಲ್ಲಾ ದಂಡಾಧಿಕಾರಿಯವರ ಕಾರ್ಯಾಲಯ, ಮಂಗಳೂರು

ಸಂಖ್ಯೆ ಎ.ಆರ್.ಎಮ್(1) 176/2019/E- **65067**/ಸಿ3

ದಿನಾಂಕ: 11-03-2019

## ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನಡವಳಿ

ಪ್ರಸ್ತಾವನೆ:

ಚುನಾವಣಾ ಆಯೋಗವು ಕರ್ನಾಟಕ ಲೋಕ ಸಭೆಗೆ ಸಾರ್ವತ್ರಿಕ ಚುನಾವಣೆಯನ್ನು ಘೋಷಿಸಿದ್ದು ಚುನಾವಣೆ ಸಂದರ್ಭದಲ್ಲಿ ಮುಕ್ತ ಮತ್ತು ನ್ಯಾಯಯುತ ಹಾಗೂ ನಿಷ್ಪಕ್ಷಪಾತವಾಗಿ ಚುನಾವಣೆ ನಡೆಸುವುದನ್ನು ಖಾತರಿಪಡಿಸಲು ಚುನಾವಣಾ ಆಯೋಗವು ಹಲವಾರು ಮಾರ್ಗಸೂಚಿ ಮತ್ತು ಆದೇಶಗಳನ್ನು ಹೊರಡಿಸಿರುತ್ತದೆ. ಚುನಾವಣಾ ಆಯೋಗದ ಸ್ಥಾಯಿ ಆದೇಶ ಸಂಖ್ಯೆ 464/96 ಎ.ಎಲ್.ಒ.ಪಿ.ಎಲ್.ಎನ್ ದಿನಾಂಕ 13-03-1996 ರನ್ವಯ ಪರವಾನಿಗೆ ಪಡೆದು ಆಯುಧ ಹೊಂದಿರುವಂತಹ ಪರವಾನಿಗೆದಾರರ ಕುರಿತು ತೀವ್ರ ಪೂರ್ವಭಾವಿ ಪರಿಶೀಲನೆ ಮಾಡಿ ಚುನಾವಣೆಯ ಅವಧಿಯಲ್ಲಿ ಸಾರ್ವಜನಿಕ ಶಾಂತಿ, ಸುವ್ಯವಸ್ಥೆ ಮತ್ತು ಸಾರ್ವಜನಿಕ ಸುರಕ್ಷತೆ ಕಾಪಾಡುವ ದೃಷ್ಟಿಯಿಂದ ಅವಶ್ಯವೆಂದು ಕಂಡುಬರುವ ಜಿಲ್ಲೆಯ ಎಲ್ಲಾ ಪರವಾನಿಗೆದಾರರು (ಪೊಲೀಸ್ ಕಮೀಷನರೇಟ್ ವ್ಯಾಪ್ತಿಯನ್ನು ಹೊರತುಪಡಿಸಿ) ಅವರ ಪರವಾನಿಗೆಯಲ್ಲಿ ಹೊಂದಿರುವ ಆಯುಧಗಳನ್ನು ಡಿಪಾಸಿಟ್ ನಲ್ಲಿ ಇರಿಸಲು ಕ್ರಮಕೈಗೊಳ್ಳಬೇಕೆಂದು ನಿರ್ದೇಶನ ನೀಡಿರುತ್ತದೆ.

ಜಿಲ್ಲೆಯ ಸ್ಕ್ರೀನಿಂಗ್ ಸಮಿತಿಯು ಸಭೆಯನ್ನು ನಡೆಸಿ ಬೆಳೆ ರಕ್ಷಣೆ ಹಾಗೂ ಆತ್ಮ ರಕ್ಷಣೆಗಾಗಿ ಮಂಜೂರು ಮಾಡಲಾಗಿರುವಂತಹ ಪರವಾನಿಗೆಯಲ್ಲಿ ಹೊಂದಿರುವ ಶಸ್ತ್ರಾಸ್ತ್ರಗಳನ್ನು ಠೇವಣಿ ಇಡುವ ವಿಚಾರದಲ್ಲಿ ಕೂಲಂಕುಷವಾಗಿ ಪರಿಶೀಲಿಸಿ ಯಾವುದೇ ಗಲಭೆ /ದೊಂಬಿಗಳಿಗೆ ಅವಕಾಶ ನೀಡದೆ ಉದ್ದೇಶಿತ ಲೋಕಸಭಾ ಚುನಾವಣೆಯು ಶಾಂತಿಯುತವಾಗಿ ನಡೆಸುವಂತಾಗಲು ಮುಂಜಾಗ್ರತಾ ಕ್ರಮವಾಗಿ ಜಿಲ್ಲೆಯಲ್ಲಿ ಬೆಳೆ ರಕ್ಷಣೆ ಹಾಗೂ ಆತ್ಮ ರಕ್ಷಣೆಗಾಗಿ ಮಂಜೂರು ಮಾಡಲಾಗಿರುವಂತಹ ಪರವಾನಿಗೆಗಳಲ್ಲಿ ಹೊಂದಿರುವ ಎಲ್ಲಾ ಶಸ್ತ್ರಾಸ್ತ್ರಗಳನ್ನು ಚುನಾವಣಾ ಅವಧಿಯಲ್ಲಿ ಠೇವಣಿ ಇಡುವುದು ಸೂಕ್ತವೆಂದು ನಿರ್ಣಯಿಸಿರುತ್ತದೆ.

ಜಿಲ್ಲೆಯ ಪ್ರಸಕ್ತ ಕಾನೂನು ಸುವ್ಯವಸ್ಥೆ ಸಾರ್ವಜನಿಕ ಶಾಂತಿ ಸುರಕ್ಷತೆಯ ಬಗ್ಗೆ ಪರಿಶೀಲನೆ ನಡೆಸಿ ಸಾರ್ವಜನಿಕ ಹಿತದೃಷ್ಟಿಯಿಂದ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಬೆಳೆ ರಕ್ಷಣೆಗಾಗಿ ಮತ್ತು ಆತ್ಮ ರಕ್ಷಣೆಗಾಗಿ ಮಂಜೂರು ಮಾಡಲಾಗಿರುವ ಆಯುಧ ಪರವಾನಿಗೆಗಳನ್ನು ಭಾರತೀಯ ಶಸ್ತ್ರಾಸ್ತ್ರ ಕಾಯಿದೆ 1959 ರ ಕಲಂ 17 (3) (ಬಿ) ರನ್ವಯ ತಾತ್ಕಾಲಿಕ ಅವಧಿಗೆ ಅಮಾನತಿನಲ್ಲಿರಿಸುವುದು ಸೂಕ್ತವೆಂದು ಹಾಗೂ ಸದರಿ ಅವಧಿಯಲ್ಲಿ ಪರವಾನಿಗೆಯಲ್ಲಿ ಹೊಂದಿರುವ ಆಯುಧಗಳನ್ನು ಠೇವಣಿಯಲ್ಲಿರಿಸಲು ಆದೇಶಿಸುವುದು ಅವಶ್ಯವೆಂದು ಮನಗಂಡು **ಶ್ರೀ ಸಸಿಕಾಂತ್ ಸೆಂಥಿಲ್ ಎಸ್., ಭಾ.ಆ. ಸೇ., ಜಿಲ್ಲಾ ದಂಡಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ,** ಮಂಗಳೂರು ಆದ ನಾನು ಸದ್ರಿ ಪರವಾನಿಗೆಗಳನ್ನು ದಿನಾಂಕ: 11-03-2019 ರಿಂದ ದಿನಾಂಕ 31-05-2019 ರವರೆಗೆ ಅಮಾನತಿನಲ್ಲಿರಿಸಿ ಈ ಕೆಳಗಿನಂತೆ ಆದೇಶಿಸಿರುತ್ತೇನೆ.

### ಆದೇಶ

1. ಪೊಲೀಸ್ ಕಮೀಷನರೇಟ್ ವ್ಯಾಪ್ತಿಯನ್ನು ಹೊರತುಪಡಿಸಿ ಉಳಿದಂತೆ ಜಿಲ್ಲೆಯ ಬೆಳೆ ರಕ್ಷಣೆಗಾಗಿ ಶಸ್ತ್ರಾಸ್ತ್ರ ಪರವಾನಿಗೆ ಹೊಂದಿರುವ ಪರವಾನಿಗೆದಾರರು ತಮ್ಮ ಪರವಾನಿಗೆಯಲ್ಲಿ ಹೊಂದಿರುವ ಶಸ್ತ್ರಾಸ್ತ್ರಗಳನ್ನು ದಿನಾಂಕ 11-03-2019 ರಿಂದ 18-03-2019 ರೊಳಗೆ ನಮೂನೆ ನಂಬ್ರ 8 ರ ಪರವಾನಿಗೆ ಹೊಂದಿರುವ ಅಧಿಕೃತ ಕೋವಿ ಮದ್ದುಗುಂಡು ವ್ಯಾಪಾರಿಗಳಲ್ಲಿ ಅಥವಾ ಪೊಲೀಸ್ ಠಾಣೆಗಳಲ್ಲಿ ಠೇವಣಿ ಇಡುವುದು. ಈ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ತಮ್ಮ ಬೆಳೆರಕ್ಷಣೆಗಾಗಿ ಆಯುಧದ ತೀರಾ ಅವಶ್ಯಕತೆ ಇದೆ ಎಂದಾದಲ್ಲಿ ಈ ಆದೇಶ ಹೊರಡಿಸಿದ ಒಂದು ವಾರದೊಳಗೆ ಸಂಬಂಧಪಟ್ಟ ಪೂರಕ ದಾಖಲೆಗಳೊಂದಿಗೆ ಸಂಬಂಧಪಟ್ಟ ತಹಶೀಲ್ದಾರರಿಗೆ ಅಹವಾಲುಗಳನ್ನು ಸಲ್ಲಿಸುವುದು.

2. ಪೊಲೀಸ್ ಕಮೀಷನರೇಟ್ ವ್ಯಾಪ್ತಿಯನ್ನು ಹೊರತುಪಡಿಸಿ ಉಳಿದಂತೆ ಜಿಲ್ಲೆಯ ಆತ್ಮ ರಕ್ಷಣೆಗಾಗಿ ಶಸ್ತ್ರಾಸ್ತ್ರ ಪರವಾನಿಗೆ ಹೊಂದಿದವರು ತಮ್ಮ ಪರವಾನಿಗೆಯಲ್ಲಿ ಹೊಂದಿರುವ ರಿವಾಲ್ವರ್/ಪಿಸ್ತೂಲ್ ಗಳನ್ನು ಹತ್ತಿರದ ಪೊಲೀಸ್ ಠಾಣೆಯಲ್ಲಿ ಹಾಗೂ ಇತರ ಶಸ್ತ್ರಾಸ್ತ್ರಗಳನ್ನು (ಎಸ್.ಬಿ.ಬಿ.ಎಲ್/ಡಿ.ಬಿ.ಬಿ.ಎಲ್/ಎಸ್.ಬಿ.ಎಂ.ಎಲ್/ಡಿ.ಬಿ.ಎಂ.ಎಲ್/ರೈಫಲ್) ಹತ್ತಿರದ ನಮೂನೆ ನಂಬ್ರ 8 ರ ಪರವಾನಿಗೆ ಹೊಂದಿರುವ ಅಧಿಕೃತ ಕೋವಿ ಮದ್ದುಗುಂಡು ವ್ಯಾಪಾರಿಗಳಲ್ಲಿ ಅಥವಾ ಪೊಲೀಸ್ ಠಾಣೆಗಳಲ್ಲಿ ದಿನಾಂಕ 11-03-2019 ರಿಂದ 18-03-2019 ರೊಳಗೆ ಠೇವಣಿ ಇಡುವುದು. ಈ ಬಗ್ಗೆ ಯಾವುದೇ ಆಕ್ಷೇಪಗಳಿದ್ದಲ್ಲಿ ಹಾಗೂ ತಮ್ಮ ಸ್ವರಕ್ಷಣೆಗೆ ಆಯುಧದ ತೀರಾ ಅವಶ್ಯಕತೆ ಇದೆ ಎಂದಾದಲ್ಲಿ ಈ ಆದೇಶ ಹೊರಡಿಸಿದ ದಿನಾಂಕದಿಂದ ಒಂದು ವಾರದೊಳಗೆ ಸಂಬಂಧಪಟ್ಟ ಪೂರಕ ದಾಖಲೆಗಳೊಂದಿಗೆ ಮಂಗಳೂರು ನಗರ ವ್ಯಾಪ್ತಿಯನ್ನು ಬಿಟ್ಟು ಉಳಿದ ಕಡೆ ಪೊಲೀಸ್ ಅಧೀಕ್ಷಕರು, ದಕ್ಷಿಣ ಕನ್ನಡ ಜಿಲ್ಲೆ ಇವರಿಗೆ ಅಹವಾಲುಗಳನ್ನು ಸಲ್ಲಿಸುವುದು.

3. ಅಮಾನತಿನ ಅವಧಿ ಮುಗಿದ ತಕ್ಷಣ ಆಯುಧ ಠೇವಣಿ ಪಡೆದ ಪೊಲೀಸ್ ಅಧಿಕಾರಿಗಳು/ಡೀಲರರು ಅಂತಹ ಆಯುಧಗಳನ್ನು ಠೇವಣಿದಾರರಿಗೆ ಹಿಂತಿರುಗಿಸುವಂತೆಯೂ , ಪರವಾನಿಗೆದಾರರು ಆಯುಧವನ್ನು ಮರು ಪಡೆದುಕೊಳ್ಳಬಹುದಾಗಿದೆ.

ಈ ಆದೇಶವನ್ನು ದಿನಾಂಕ 11-03-2019 ರಂದು ನನ್ನ ಸ್ವಹಸ್ತ-ಸಹಿ ಮತ್ತು ಮುದ್ರೆಯೊಂದಿಗೆ ಹೊರಡಿಸಿದೆ.

ಸಸಿಕಾಂತ್ ಸೆಂಥಿಲ್ ಎಸ್
ಜಿಲ್ಲಾದಂಡಾಧಿಕಾರಿ,
ದಕ್ಷಿಣ ಕನ್ನಡ ಜಿಲ್ಲೆ,ಮಂಗಳೂರು

ಪ್ರತಿ: ಪೊಲೀಸ್ ಅಧೀಕ್ಷಕರು ದ. ಕ ಜಿಲ್ಲೆ,ಮಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
ಪ್ರತಿ: ಉಪವಿಭಾಗಾಧಿಕಾರಿ ಮಂಗಳೂರು/ಪುತ್ತೂರು ಇವರಿಗೆ ಮಾಹಿತಿಗಾಗಿ
ಪ್ರತಿ: ಜಿಲ್ಲಾ ವಾರ್ತಾಧಿಕಾರಿ, ದ.ಕ.ಮಂಗಳೂರು ಇವರಿಗೆ ಕಳುಹಿಸುತ್ತಾ ಇದನ್ನು ಜಿಲ್ಲೆಯ ಎಲ್ಲಾ ಪತ್ರಿಕೆಗಳಲ್ಲಿ ಸುದ್ದಿಯಾಗಿ ಪ್ರಕಟಿಸಿ, ವ್ಯಾಪಕ ಪ್ರಚಾರ ನಡೆಸಲು ಸೂಚನೆ ಸಹಿತ.
ಪ್ರತಿ: ಜಿಲ್ಲೆಯ ಎಲ್ಲಾ ತಾಲೂಕು ದಂಡಾಧಿಕಾರಿಯವರಿಗೆ ಮಾಹಿತಿಗಾಗಿ
ಪ್ರತಿ: ಜಿಲ್ಲೆಯ ಎಲ್ಲಾ ಚುನಾವಣಾಧಿಕಾರಿ / ಉಪಚುನಾವಣಾಧಿಕಾರಿಯವರಿಗೆ ಮಾಹಿತಿಗಾಗಿ
ಪ್ರತಿ: ಎನ್.ಐ.ಸಿ ಅಧಿಕಾರಿಯವರಿಗೆ ವೆಬ್ ಸೈಟ್ ನಲ್ಲಿ ಅಳವಡಿಸುವ ಕುರಿತು

ದೂರವಾಣಿ: (0824) 2220584,590
1077 (ಉಚಿತ ಕರೆ)
ಫ್ಯಾಕ್ಸ್: (0824) 2220584
ಇ-ಮೇಲ್: dc.mnglr@gmail.com

ಕರ್ನಾಟಕ ಸರಕಾರ
( ಕಂದಾಯ ಇಲಾಖೆ )

# ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರ ಕಾರ್ಯಾಲಯ , ಮಂಗಳೂರು

ಸಂಖ್ಯೆ ಎ.ಆರ್.ಎಮ್(1) 176/2019/ E- 65067/ಸಿ3 ದಿನಾಂಕ: 11-03-2019

## ನಡವಳಿಗಳು

ವಿಷಯ: 2019ರ ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ ಪರವಾನಿಗೆ ಹೊಂದಿದ ಆಯುಧಗಳನ್ನು ಸೆರೆಂಡರ್ ಮಾಡುವ ಬಗ್ಗೆ ಸ್ಕ್ರೀನಿಂಗ್ ಸಮಿತಿಯ ನಡವಳಿ.

ಉಪಸ್ಥಿತರು
1) ಶ್ರೀ ಸಸಿಕಾಂತ್ ಸೆಂಥಿಲ್ ,ಐ.ಎ.ಎಸ್, ಜಿಲ್ಲಾ ದಂಡಾಧಿಕಾರಿ ಮತ್ತು ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು
2) ಶ್ರೀ ಲಕ್ಷ್ಮೀ ಪ್ರಸಾದ್ ಎಂ, ಐ.ಪಿ.ಎಸ್, ಜಿಲ್ಲಾ ಪೊಲೀಸ್ ಅಧೀಕ್ಷಕರು, ದ. ಕ ಜಿಲ್ಲೆ, ಮಂಗಳೂರು.
3) ಶ್ರೀ ವೆಂಕಟಾಚಲಪತಿ ಆರ್, ಕೆ.ಎಸ್.ಎಸ್, ಅಪರ ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು
4) ಶ್ರೀ ರವಿಚಂದ್ರ ನಾಯಕ್, ಕೆ.ಎಸ್.ಎಸ್., ಸಹಾಯಕ ಕಮಿಷನರ್, ಮಂಗಳೂರು ಉಪವಿಭಾಗ
5) ಶ್ರೀ ಕೃಷ್ಣ ಮೂರ್ತಿ ಹೆಚ್.ಕೆ., ಕೆ.ಎ.ಎಸ್.ಸಹಾಯಕ ಕಮೀಷನರ್, ಪುತ್ತೂರು ಉಪವಿಭಾಗ
ಮತ್ತು ಹಾಜರಿಪಟ್ಟಿಯಲ್ಲಿ ಸಹಿಮಾಡಿರುವ ಅಧಿಕಾರಿಗಳು.

*************

ಪ್ರಾರಂಭದಲ್ಲಿ ಜಿಲ್ಲಾಧಿಕಾರಿಯವರು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಉದ್ದೇಶಿಸಿ ಚುನಾವಣಾ ಆಯೋಗವು ಕರ್ನಾಟಕ ಲೋಕ ಸಭೆಗೆ ಸಾರ್ವತ್ರಿಕ ಚುನಾವಣೆಯನ್ನು ಘೋಷಿಸಿದ್ದು ಚುನಾವಣೆ ಸಂದರ್ಭದಲ್ಲಿ ಮುಕ್ತ ಮತ್ತು ನ್ಯಾಯಯುತ ಹಾಗೂ ನಿಷ್ಪಕ್ಷಪಾತವಾಗಿ ಚುನಾವಣೆ ನಡೆಸುವುದನ್ನು ಖಾತರಿಪಡಿಸಲು ಚುನಾವಣಾ ಆಯೋಗವು ಹಲವಾರು ಮಾರ್ಗಸೂಚಿ ಮತ್ತು ಆದೇಶಗಳನ್ನು ಹೊರಡಿಸಿರುತ್ತದೆ. ಚುನಾವಣಾ ಆಯೋಗದ ಸ್ಥಾಯಿ ಆದೇಶ ಸಂಖ್ಯೆ 464/96 ಎ.ಎಲ್.ಒ.ಪಿ.ಎಲ್.ಎನ್ ದಿನಾಂಕ 13-03-1996 ರನ್ವಯ ಪರವಾನಿಗೆ ಪಡೆದು ಆಯುಧ ಹೊಂದಿರುವಂತಹ ಪರವಾನಿಗೆದಾರರ ಕುರಿತು ತೀವ್ರ ಪೂರ್ವಭಾವಿ ಪರಿಶೀಲನೆ ಮಾಡಿ ಚುನಾವಣೆಯ ಅವಧಿಯಲ್ಲಿ ಸಾರ್ವಜನಿಕ ಶಾಂತಿ ,ಸುವ್ಯವಸ್ಥೆ ಮತ್ತು ಸಾರ್ವಜನಿಕ ಸುರಕ್ಷತೆ ಕಾಪಾಡುವ ದೃಷ್ಟಿಯಿಂದ ಅವಶ್ಯವೆಂದು ಕಂಡುಬರುವ ಪರವಾನಿಗೆದಾರರು ಅವರ ಪರವಾನಿಗೆಯಲ್ಲಿ ಹೊಂದಿರುವ ಆಯುಧಗಳನ್ನು ಡಿಪಾಸಿಟ್ ನಲ್ಲಿ ಇರಿಸಲು ಕ್ರಮಕೈಗೊಳ್ಳಬೇಕೆಂದು ನಿರ್ದೇಶನ ನೀಡಿರುತ್ತದೆ. ಆದುದರಿಂದ ಈ ಕೆಳಗಿನ ವಿಚಾರಗಳಿಗೆ ಸಂಬಂಧಿಸಿದಂತೆ ಸಭೆಯಲ್ಲಿ ಚರ್ಚಿಸಲಾಯಿತು.

**ಬೆಳೆ ರಕ್ಷಣೆಗೆ ತಹಶೀಲ್ದಾರರು ಮಂಜೂರುಮಾಡಿರುವ ಆಯುಧ ಪರವಾನಿಗೆಗಳನ್ನು ಕುರಿತು :**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯನ್ನು ಹೊರತುಪಡಿಸಿ, ಉಳಿದಂತೆ ವಿವಿಧ ತಾಲೂಕುಗಳಲ್ಲಿ ತಹಶೀಲ್ದಾರರು ಬೆಳೆ ರಕ್ಷಣೆಗಾಗಿ ಈ ಹಿಂದೆ (2015ರ ಪೂರ್ವ ಮಂಜೂರು ಮಾಡಿರುವುದು) ಆಯುಧ ಪರವಾನಿಗೆಗಳು ಮಂಜೂರು ಮಾಡಿದ್ದು ಈ ಆಯುಧ ಪರವಾನಿಗೆಗಳಲ್ಲಿ ಹೊಂದಿರುವ ಸಶ್ತ್ರಾಸ್ತ್ರಗಳನ್ನು ಠೇವಣಿ ಇಡುವ ವಿಚಾರದಲ್ಲಿ ಹಾಗೂ ಇದರಿಂದಾಗಿ ಕೃಷಿಕರಿಗೆ ಅನಾನುಕೂಲವಾಗುವ ಸಾಧ್ಯತೆ ಇದೆಯೇ ಎಂಬ ಬಗ್ಗೆ ಕೂಡಾ ಸಭೆಯಲ್ಲಿ ಚರ್ಚಿಸಲಾಯಿತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಭತ್ತ, ಅಡಿಕೆ, ತೆಂಗು, ಮುಂತಾದುವುಗಳು ಮುಖ್ಯ ಬೆಳೆಗಳಾಗಿದ್ದು ಪ್ರಕೃತ ಭತ್ತದ ಬೆಳೆ ಇಲ್ಲದ ಕಾರಣ ಹಾಗೂ ಅಡಿಕೆ, ತೆಂಗು ಮುಂತಾದ ಬೆಳೆಗಳಿಗೆ ಸಾಮಾನ್ಯವಾಗಿ ಮಂಗಗಳ ಕಾಟ ಇರುವುದರಿಂದ ಇವುಗಳನ್ನು ಹೆದರಿಸಿ ಓಡಿಸಲು ಶಸ್ತ್ರಾಸ್ತ್ರವನ್ನೇ ಬಳಸಬೇಕೆಂದಿಲ್ಲ ಎಂದು ಸಭೆಯಲ್ಲಿ ಹಾಜರಿದ್ದ ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.

ಪ್ರಕೃತ ಬೆಳೆರಕ್ಷಣೆಗಾಗಿ ಶಸ್ತ್ರಾಸ್ತ್ರದ ತೀರಾ ಅವಶ್ಯಕತೆ ಇಲ್ಲದಿರುವ ಹಿನ್ನಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೆಳೆರಕ್ಷಣೆಗಾಗಿ ಈ ಹಿಂದೆ ತಹಶೀಲ್ದಾರರು ಮಂಜೂರು ಮಾಡಿರುವ ಹಾಗೂ ಜಿಲ್ಲಾಧಿಕಾರಿಯವರಿಂದ ಮಂಜೂರಾಗಿರುವ ಪರವಾನಿಗೆಗಳನ್ನು ಹೊಂದಿರುವ ಪರವಾನಿಗೆದಾರರು ಸದ್ರಿ ಪರವಾನಿಗೆಯಲ್ಲಿ ಹೊಂದಿರುವ ಎಸ್.ಬಿ.ಬಿ.ಎಲ್/ ಎಸ್.ಬಿ.ಎಂ.ಎಲ್/ಡಿ.ಬಿ.ಬಿ.ಎಲ್/ಡಿ.ಬಿ.ಎಂ.ಎಲ್/ 0.22 ರೈಫಲ್ ಕೋವಿಗಳನ್ನು ನಮೂನೆ 8 ರಲ್ಲಿ ಸಶ್ತ್ರಾಸ್ತ್ರಗಳನ್ನು ಠೇವಣಿ ಇಡುವ ಬಗ್ಗೆ ಪರವಾನಿಗೆಯನ್ನು ಹೊಂದಿರುವ ಹತ್ತಿರದ ಅಧಿಕೃತ ಕೋವಿ ಮದ್ದುಗುಂಡು ವ್ಯಾಪಾರಿಗಳಲ್ಲಿ / ಪೊಲೀಸ್ ಠಾಣೆಗಳಲ್ಲಿ ದಿನಾಂಕ: 18-03-2018 ರೊಳಗೆ ಠೇವಣಿ ಇಡಬೇಕೆಂಧು ಸ್ಕ್ರೀನಿಂಗ್ ಸಮಿತಿಯಲ್ಲಿ ನಿರ್ಣಯಿಸಲಾಯಿತು. ಈ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಅರಣ್ಯ ಪ್ರದೇಶಕ್ಕೆ ಹತ್ತಿರವಾಗಿರುವ ಕೃಷಿ ಭೂಮಿಗಳಿಗೆ ಒಂದು ವೇಳೆ ಆನೆ, ಹಂದಿ ಇತ್ಯಾದಿ ಕಾಡು ಪ್ರಾಣಿಗಳಿಂದ ಉಪಟಳವಾಗುತ್ತಿದ್ದಲ್ಲಿ, ತಮ್ಮ ಬೆಳೆರಕ್ಷಣೆಗಾಗಿ ಆಯುಧದ ತೀರಾ ಅವಶ್ಯಕತೆ ಇದೆ ಎಂದಾದಲ್ಲಿ ಈ ಆದೇಶ ಹೊರಡಿಸಿದ ಒಂದು ವಾರದೊಳಗೆ ಸಂಬಂಧಪಟ್ಟ ಪೂರಕ ದಾಖಲೆಗಳೊಂದಿಗೆ ತಹಶೀಲ್ದಾರರಿಗೆ ಅಹವಾಲುಗಳನ್ನು ಸಲ್ಲಿಸಲು ಪರವಾನಿಗೆದಾರರಿಗೆ ಅವಕಾಶ ನೀಡುವುದೆಂದೂ ಹಾಗೂ ತಹಶೀಲ್ದಾರರಿಗೆ ಅವರ ಕೋರಿಕೆ ಸಮಂಜಸವೆಂದು ಕಂಡುಬಂದಲ್ಲಿ ಜಿಲ್ಲಾದಂಡಾಧಿಕಾರಿಯವರ ಗಮನಕ್ಕೆ ತರುವಂತೆ ತಿಳಿಸಲಾಯಿತು. ಅಂತಹ ಪರವಾನಿಗೆದಾರರಿಗೆ ಶಸ್ತ್ರಾಸ್ತ್ರವನ್ನು ಠೇವಣಿ ಇಡುವ ವಿಚಾರದಲ್ಲಿ ವಿನಾಯಿತಿ ನೀಡಬಹುದೆಂದು ಸಭೆಯಲ್ಲಿ ನಿರ್ಣಯಿಸಲಾಯಿತು.

**<u>ಜಿಲ್ಲೆಯಲ್ಲಿ ಆತ್ಮ ರಕ್ಷಣೆಗೆ ನೀಡಲಾದ ಪರವಾನಿಗೆಗಳ ಕುರಿತು:-</u>**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ದಂಡಾಧಿಕಾರಿ ಕಛೇರಿಯಲ್ಲಿ ಆತ್ಮ ರಕ್ಷಣೆಗಾಗಿ ಪೊಲೀಸ್ ಕಮೀಷನರೇಟ್ ವ್ಯಾಪ್ತಿ ಹೊರತುಪಡಿಸಿ ಉಳಿದಂತೆ ಜಿಲ್ಲೆಯಲ್ಲಿ ಆಯುಧ ಪರವಾನಿಗೆ ಮಂಜೂರು ಮಾಡಿದ್ದು ಈ ಆಯುಧ ಪರವಾನಿಗೆಗಳಲ್ಲಿ ಹೊಂದಿರುವ ಶಸ್ತ್ರಾಸ್ತ್ರಗಳನ್ನು ಠೇವಣಿ ಇಡುವ ವಿಚಾರದಲ್ಲಿ ಹಾಗೂ ಈ ಬಗ್ಗೆ ಅನುಕೂಲ /ಅನಾನುಕೂಲಗಳ ಬಗ್ಗೆ ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಲಾಯಿತು.

ದಕ್ಷಿಣ ಕನ್ನಡ ಜಿಲ್ಲೆ ಅತೀ ಸೂಕ್ಷ್ಮ ಪ್ರದೇಶವಾಗಿದ್ದು, ಜಿಲ್ಲೆಯ ಇತಿಹಾಸವನ್ನು ಅವಲೋಕಿಸಿದಾಗ ಈ ಹಿಂದೆ ಹಲವಾರು ಮತೀಯ ಗಲಭೆಗಳು/ಸಂಘರ್ಷಗಳು, ಚುನಾವಣೆ ಸಂದರ್ಭಗಳಲ್ಲಿ ಕೂಡಾ ಅಲ್ಲಲ್ಲಿ ಸಂಘರ್ಷಗಳು ನಡೆದಿರುವ ಬಗ್ಗೆ ಉಲ್ಲೇಖವಿರುತ್ತದೆ. ಚುನಾವಣೆಯಂತಹ ಸಂದರ್ಭಗಳಲ್ಲಿ ಸಣ್ಣ ವಿಚಾರಗಳು ಕೂಡಾ ದೊಡ್ಡ ಸಂಘರ್ಷಕ್ಕೆ ಎಡೆಮಾಡಿಕೊಡುವ ಸಾಧ್ಯತೆ ಇದ್ದು, ಇಂತಹ ಸಂದರ್ಭಗಳಲ್ಲಿ ಸಾರ್ವಜನಿಕರಿಗೆ ಪರವಾನಿಗೆಯಲ್ಲಿ ಹೊಂದಿರುವ ಶಸ್ತ್ರಾಸ್ತ್ರಗಳು ಸುಲಭವಾಗಿ ದೊರಕುವಂತಾಗಿ ಇಡೀ ಪರಿಸ್ಥಿತಿಯೇ ಕೈಮೀರಿಹೋಗುವ ಸಾಧ್ಯತೆ ಇದೆ. ಅಲ್ಲದೆ, ಚುನಾವಣೆ ಸಂದರ್ಭಗಳಲ್ಲಿ ಸಾಕಷ್ಟು ಪೊಲೀಸ್ ಸಿಬ್ಬಂದಿಗಳು ಚುನಾವಣಾ ಕಾರ್ಯ ನಿಮಿತ್ತ ವಿವಿಧ ಕರ್ತವ್ಯಗಳಲ್ಲಿ ನಿಯೋಜನೆಗೊಂಡಿರುವುದರಿಂದ ಮತ್ತು ಬಂದೋಬಸ್ತ್ ಮುಂತಾದ ವಿಚಾರದಲ್ಲಿ ಮಗ್ನರಾಗಿರುವುದರಿಂದ ಪ್ರತಿಯೊಬ್ಬ ಪರವಾನಿಗೆದಾರರನ್ನು ಸೂಕ್ಷ್ಮವಾಗಿ ಗಮನಿಸಲು ಸಾಧ್ಯವಾಗದೇ ಇರಬಹುದು. ಅಲ್ಲದೆ ಗಲಭೆಗಳು ನಡೆದಲ್ಲಿ ನಿಯಂತ್ರಿಸಲು ಸಾಧ್ಯವಾಗದೆ ಕಾನೂನು ಸುವ್ಯವಸ್ಥೆಗೆ ತೊಡಕಾಗಿ ಪರಿಸ್ಥಿತಿಯು ಹತೋಟಿ ಮೀರಿ ಹೋಗುವ ಸಾಧ್ಯತೆ ಇರುತ್ತದೆ.

ಪರವಾನಿಗೆಯಲ್ಲಿ ಸಶ್ತ್ರಾಸ್ತ್ರ ಹೊಂದಿರುವ ಯಾವನೇ ವ್ಯಕ್ತಿ ಕ್ಷಣ ಕ್ಷಣಕ್ಕೂ ಬದಲಾವಣೆಯಾಗುತ್ತಿರುವ ಸನ್ನಿವೇಶಗಳಲ್ಲಿ ಸಮಾಜ ವಿದ್ರೋಹಕ ಶಕ್ತಿಯಾಗಿ ಮಾರ್ಪಾಡಾಗುವ ಸಾಧ್ಯತೆ ಇರುತ್ತದೆ ಎಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು ಅಲ್ಲದೆ ಚುನಾವಣಾ ಪ್ರಚಾರ ಮುಂತಾದ ಕಾರ್ಯಗಳಲ್ಲಿ ಆತ್ಮ ರಕ್ಷಣೆಗಾಗಿ ಶಸ್ತ್ರಾಸ್ತ ಪರವಾನಿಗೆ ಹೊಂದಿದವರು ಭಾಗವಹಿಸುತ್ತಿದ್ದಾರೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಸೂಕ್ಷ್ಮವಾಗಿ ಗಮನಿಸಲು ಸಾಧ್ಯವಾಗದೇ ಇರಬಹುದು.ಈ ಎಲ್ಲಾ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಎಲ್ಲಾ ಸಾಧಕ ಭಾದಕಗಳ ಕುರಿತು ಚರ್ಚಿಸಿ ಯಾವುದೇ ಗಲಭೆ/ದೊಂಬಿಗಳಿಗೆ ಅವಕಾಶ ನೀಡದೆ ಆ ಮೂಲಕ ಚುನಾವಣೆಯು ಶಾಂತಿಯುತವಾಗಿ ನಡೆಸುವಂತಾಗಲು ಮುಂಜಾಗ್ರತಾ ಕ್ರಮವಾಗಿ ಆತ್ಮ ರಕ್ಷಣೆಗಾಗಿ ಮಂಜೂರು ಮಾಡಲಾಗಿರುವಂತಹ ಪರವಾನಿಗೆಯಲ್ಲಿ ಹೊಂದಿರುವ ಶಸ್ತ್ರಾಸ್ತ್ರಗಳನ್ನು ಠೇವಣಿ ಇಡುವುದು ಸೂಕ್ತವೆಂದು ಹಾಗೂ ಈ ಬಗ್ಗೆ ಜಿಲ್ಲಾದಂಡಾಧಿಕಾರಿಯವರು ಸೂಕ್ತ ಆದೇಶವನ್ನು ಹೊರಡಿಸುವುದು ಸೂಕ್ತವೆಂದು ಸಭೆಯಲ್ಲಿ ನಿರ್ಣಯಿಸಲಾಯಿತು.

ಚುನಾವಣೆ ಸಂದರ್ಭಗಳಲ್ಲಿ ಪೊಲೀಸ್ ಪಡೆಗಳು ಹಾಗೂ ಪ್ಯಾರಾ ಮಿಲಿಟರಿ ಪಡೆಗಳು ಭದ್ರತೆಯ ವಿಷಯದಲ್ಲಿ ಪಾಲ್ಗೊಳ್ಳುವುದರಿಂದ ಸಾಕಷ್ಟು ಪೊಲೀಸ್ ಸಿಬ್ಬಂದಿಗಳು ಚುನಾವಣಾ ಕಾರ್ಯ ನಿಮಿತ್ತ ಜಿಲ್ಲೆಯಾದ್ಯಂತ ಚುರುಕಾಗಿ ಓಡಾಟ ನಡೆಸುತ್ತಿರುವುದರಿಂದ ಇಡೀ ಜಿಲ್ಲೆಯಾದ್ಯಂತ ಭದ್ರತೆಯ ಭಾವನೆ ಇರುವುದರಿಂದ ಆತ್ಮ ರಕ್ಷಣೆಗಾಗಿ ಆಯುಧ ಪರವಾನಿಗೆ ಪಡೆದವರಿಗೆ ಭದ್ರತೆಯ ಕೊರತೆ ಉಂಟಾಗುವ ಸಾಧ್ಯತೆ ಇಲ್ಲ ಎಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಗಿದ್ದು, ಅಲ್ಲದೆ, ಈಗಾಗಲೇ ಜಿಲ್ಲೆಯಲ್ಲಿ ಯಾವುದೇ ಶಸ್ತ್ರಾಸ್ತ್ರ, ಆಯುಧ ಹಾಗೂ ಮದ್ದುಗುಂಡುಗಳನ್ನು ಒಯ್ಯುವುದನ್ನು ಮತ್ತು ಬಳಸುವುದನ್ನು ಸಂಪೂರ್ಣವಾಗಿ ನಿಷೇಧಿಸಿ 1973 ರ ದಂಡಪ್ರಕ್ರಿಯ ಸಂಹಿತೆಯ ಕಲಂ 144 ರನ್ವಯ ಆದೇಶವನ್ನು ಹೊರಡಿಸಲಾಗಿರುವುದರಿಂದ ಆತ್ಮ ರಕ್ಷಣೆಗೆ ಆಯುಧ ಪರವಾನಿಗೆ ಪಡೆದವರಿಗೆ ಆಯುಧ ಬಳಸಲು ಮತ್ತು ಕೊಂಡೊಯ್ಯಲು ಅವಕಾಶ ಇರುವುದಿಲ್ಲ. ಆದುದರಿಂದ ಸದರಿ ಪ್ಯಾರಾದಲ್ಲಿ ವಿವರಿಸಿರುವ ಅಂಶಗಳಿಂದಾಗಿ ಆತ್ಮರಕ್ಷಣೆಗೆ ಆಯುಧವನ್ನು ತಮ್ಮಲ್ಲಿಯೇ ಇಟ್ಟುಕೊಳ್ಳುವ ತುಂಬಾ ಅವಶ್ಯಕತೆ ಕಂಡುಬರುವುದಿಲ್ಲ. ಆದುದರಿಂದ ಪರವಾನಿಗೆ ಪಡೆದವರು ತಮ್ಮ ಪರವಾನಿಗೆಯಲ್ಲಿ ಹೊಂದಿರುವ ರಿವಾಲ್ವರ್/ಪಿಸ್ತೂಲ್ ಗಳನ್ನು ಹತ್ತಿರದ ಪೊಲೀಸ್ ಠಾಣೆಯಲ್ಲಿ ಹಾಗೂ ಇತರ ಶಸ್ತ್ರಾಸ್ತ್ರಗಳನ್ನು ಹತ್ತಿರದ ನಮೂನೆ 8 ರಲ್ಲಿ ಶಸ್ತ್ರಾಸ್ತ್ರಗಳನ್ನು ಠೇವಣಿ ಇಡುವ ಬಗ್ಗೆ ಪರವಾನಿಗೆಯನ್ನು ಹೊಂದಿರುವ ಅಧಿಕೃತ ಕೋವಿ ಮದ್ದುಗುಂಡು ವ್ಯಾಪಾರಿಗಳಲ್ಲಿ ದಿನಾಂಕ: 18-03-2019 ರೊಳಗೆ ಠೇವಣಿ ಇಡಬೇಕೆಂದು ಸ್ಕ್ರೀನಿಂಗ್ ಸಮಿತಿಯಲ್ಲಿ ನಿರ್ಣಯಿಸಲಾಯಿತು.

ಈ ಬಗ್ಗೆ ಯಾವುದೇ ಆಕ್ಷೇಪಗಳಿದ್ದಲ್ಲಿ ಹಾಗೂ ತಮ್ಮ ರಕ್ಷಣೆಗೆ ಆಯುಧದ ತೀರಾ ಅವಶ್ಯಕತೆ ಇದೆ ಎಂದಾದಲ್ಲಿ ಈ ಆದೇಶ ಹೊರಡಿಸಿದ ದಿನಾಂಕದಿಂದ 18-03-2019ವರೆಗೆ ಸಂಬಂಧಪಟ್ಟ ಪೂರಕ ದಾಖಲೆಗಳೊಂದಿಗೆ ಪೊಲೀಸ್ ಅಧೀಕ್ಷಕರು, ದಕ್ಷಿಣ ಕನ್ನಡ ಜಿಲ್ಲೆ ಇವರಿಗೆ ಅಹವಾಲುಗಳನ್ನು ಸಲ್ಲಿಸಲು ಪರವಾನಿಗೆದಾರರಿಗೆ ಅವಕಾಶ ನೀಡುವುದೆಂದೂ ಮೇಲಿನ ಅಧಿಕಾರಿಯವರಿಗೆ ಪರವಾನಿಗೆದಾರರ ಕೋರಿಕೆಯು ಸಮಂಜಸವೆಂದು ಕಂಡುಬಂದಲ್ಲಿ ಜಿಲ್ಲಾದಂಡಾಧಿಕಾರಿಯವರ ಗಮನಕ್ಕೆ ತರುವಂತೆ ತಿಳಿಸಲಾಯಿತು. ಅಂತಹ ಪರವಾನಿಗೆದಾರರಿಗೆ ಶಸ್ತ್ರಾಸ್ತ್ರವನ್ನು ಠೇವಣಿ ಇಡುವ ವಿಚಾರದಲ್ಲಿ ವಿನಾಯಿತಿ ನೀಡಬಹುದೆಂದು ಸಭೆಯಲ್ಲಿ ನಿರ್ಣಯಿಸಲಾಯಿತು.

ಪೊಲೀಸ್ ಅಧೀಕ್ಷಕರು, ದ. ಕ ಜಿಲ್ಲೆ ಇವರು ತಮ್ಮ ವ್ಯಾಪ್ತಿಯಲ್ಲಿ ಪರವಾನಿಗೆದಾರರು ಸಶ್ತ್ರಾಸ್ತ್ರಗಳನ್ನು ಠೇವಣಿ ಇಟ್ಟಿರುವ ಬಗ್ಗೆ ಮಾಹಿತಿಯನ್ನು ಪೊಲೀಸ್ ಠಾಣೆವಾರು ಪ್ರತೀ ದಿನ ಜಿಲ್ಲಾದಂಡಾಧಿಕಾರಿಯವರಿಗೆ ಸಲ್ಲಿಸಬೇಕೆಂದು ಹಾಗೂ ನಮೂನೆ 8 ರಲ್ಲಿ ಶಸ್ತ್ರಾಸ್ತ್ರಗಳನ್ನು ಠೇವಣಿ ಇಡುವ ಬಗ್ಗೆ ಪರವಾನಿಗೆಯನ್ನು ಹೊಂದಿರುವ ಅಧಿಕೃತ ಕೋವಿ ಮದ್ದುಗುಂಡು ವ್ಯಾಪಾರಿಗಳು ಕೂಡಾ ತಮ್ಮಲ್ಲಿ ಪರವಾನಿಗೆದಾರರು ಸಶ್ತ್ರಾಸ್ತ್ರಗಳನ್ನು ಠೇವಣಿ ಇಟ್ಟಿರುವ ಬಗ್ಗೆ ಮಾಹಿತಿಯನ್ನು ಪ್ರತೀ ದಿನ ಜಿಲ್ಲಾದಂಡಾಧಿಕಾರಿಯವರಿಗೆ ಸಲ್ಲಿಸಬೇಕೆಂದು ನಿರ್ಣಯಿಸಲಾಯಿತು.

ಸರಕಾರಿ ಕೆಲಸಕ್ಕೆ ಹಾಗೂ ಆಯುಧ ಪರವಾನಿಗೆ ಹೊಂದಿರುವ ಬ್ಯಾಂಕ್ ಗಳ ಸುರಕ್ಷತಾ ಸಿಬ್ಬಂದಿಗಳು ಕರ್ತವ್ಯ ನಿರ್ವಹಣೆ ವೇಳೆ ಶಸ್ತ್ರಾಸ್ತ್ರಗಳನ್ನು ಬಳಸುವುದಕ್ಕೆ ತೊಂದರೆ ಆಗದಂತೆ ಶಸ್ತ್ರಾಸ್ತ್ರಗಳನ್ನು ಠೇವಣಿ ಇರಿಸುವ ವಿಚಾರದಲ್ಲಿ ವಿನಾಯಿತಿ ನೀಡುವುದೆಂದು ನಿರ್ಣಯಿಸಲಾಯಿತು.

ಎಲ್ಲಾ ಪರವಾನಿಗೆದಾರರು ಶಸ್ತ್ರಾಸ್ತ್ರಗಳನ್ನು ಠೇವಣಿ ಇರಿಸಿರುವ ಬಗ್ಗೆ ಸಂಬಂಧಪಟ್ಟ ಪೊಲೀಸ್ ಠಾಣೆಯ ಮುಖ್ಯಸ್ಥರು ಖಚಿತಪಡಿಸಿಕೊಂಡು ಪೊಲೀಸ್ ಅಧೀಕ್ಷಕರು,ದ. ಕ ಜಿಲ್ಲೆ ಇವರ ಮೂಲಕ ಜಿಲ್ಲಾದಂಡಾಧಿಕಾರಿಯವರಿಗೆ ವರದಿಯನ್ನು ಸಲ್ಲಿಸಬೇಕೆಂದು ಸಭೆಯಲ್ಲಿ ನಿರ್ಣಯಿಸಲಾಯಿತು.

ಅಮಾನತಿನ ಅವಧಿ ಮುಗಿದ ತಕ್ಷಣ ಸಶ್ತ್ರಾಸ್ತ್ರಗಳನ್ನು ಠೇವಣಿ ಪಡೆದಿರುವ ಪೊಲೀಸ್ ಅಧಿಕಾರಿಗಳು ಹಾಗೂ ನಮೂನೆ 8 ರಲ್ಲಿ ಶಸ್ತ್ರಾಸ್ತ್ರ ಗಳನ್ನು ಠೇವಣಿ ಇಡುವ ಬಗ್ಗೆ ಪರವಾನಿಗೆಯನ್ನು ಹೊಂದಿರುವ ಅಧಿಕೃತ ಕೋವಿ ಮದ್ದುಗುಂಡು ವ್ಯಾಪಾರಿಗಳು ಸಂಬಂಧಪಟ್ಟ ಶಸ್ತ್ರಾಸ್ತ್ರಗಳನ್ನು ಠೇವಣಿದಾರರಿಗೆ ಚುನಾವಣಾ ಫಲಿತಾಂಶ ಘೋಷಣೆಯಾದ ದಿನಾಂಕದಿಂದ ಒಂದು ವಾರದ ನಂತರ ಹಿಂತಿರುಗಿಸಲು ಕ್ರಮಕೈಗೊಳ್ಳಬೇಕೆಂದು ಸಭೆಯಲ್ಲಿ ನಿರ್ಣಯಿಸಲಾಯಿತು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

( ಸಸಿಕಾಂತ್ ಸೆಂಥಿಲ್ ಎಸ್. )
ಜಿಲ್ಲಾದಂಡಾಧಿಕಾರಿ ಹಾಗೂ ಜಿಲ್ಲಾಧಿಕಾರಿ
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಪ್ರತಿ: ಪೊಲೀಸ್ ಅಧೀಕ್ಷಕರು ದ. ಕ ಜಿಲ್ಲೆ,ಮಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ

ಪ್ರತಿ: ಉಪವಿಭಾಗಾಧಿಕಾರಿ ಮಂಗಳೂರು/ಪುತ್ತೂರು ಇವರಿಗೆ ಮಾಹಿತಿಗಾಗಿ

ಪ್ರತಿ ಪ್ರತಿ: ಜಿಲ್ಲಾ ವಾರ್ತಾಧಿಕಾರಿ, ದ.ಕ.ಮಂಗಳೂರು ಇವರಿಗೆ ಕಳುಹಿಸುತ್ತಾ ಇದನ್ನು ಸೂಕ್ತವಾಗಿ ಸಂಕ್ಷೇಪಿಸಿ, ಜಿಲ್ಲೆಯ ಎಲ್ಲಾ ಪತ್ರಿಕೆಗಳಲ್ಲಿ ಸುದ್ದಿಯಾಗಿ ಪ್ರಕಟಿಸಿ, ವ್ಯಾಪಕ ಪ್ರಚಾರ ನಡೆಸಲು ಸೂಚನೆ ಸಹಿತ.

ಪ್ರತಿ: ಜಿಲ್ಲೆಯ ಎಲ್ಲಾ ತಾಲೂಕು ದಂಡಾಧಿಕಾರಿಯವರಿಗೆ ಮಾಹಿತಿಗಾಗಿ

ಪ್ರತಿ:ಜಿಲ್ಲೆಯ ಎಲ್ಲಾ ಚುನಾವಣಾಧಿಕಾರಿ/ಉಪಚುನಾವಣಾಧಿಕಾರಿಯವರಿಗೆ ಮಾಹಿತಿಗಾಗಿ

ಪ್ರತಿ: ಎನ್.ಐ.ಸಿ ಅಧಿಕಾರಿಯವರಿಗೆ ವೆಬ್ ಸೈಟ್ ನಲ್ಲಿ ಅಳವಡಿಸುವ ಕುರಿತು